

بسم اللهِ الرّحمٰنِ الرّحيم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಪ್ರಕಟಗೊಂಡ ಕೆಲವು ದಿವ್ಯ ದೃಷ್ಟಾಂತಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**17-04-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಪ್ರಾರ್ಥನೆ (ದುಆ) ಇದರ ಮಹತ್ವದ ಬಗ್ಗೆ ವಿವರಿಸುತ್ತಿದ್ದರು. ಪ್ರಾರ್ಥನೆ ಮೂಲಕ ಸ್ಪಷ್ಟವಾದ ಪರಿವರ್ತನೆಗಳನ್ನು ಮಾಡಬಹುದು ಎನ್ನುವುದನ್ನು ವಿವರಿಸುತ್ತಾ ಅವರು 'ಮೆಸ್ಮರಿಸಂ' ಬಗ್ಗೆ ಸಹ ಹೇಳಿದರು. ಮೆಸ್ಮರಿಸಂ ಪ್ರಯೋಗಿಸಿ ಅನ್ಯರ ಮೇಲೆ ಪ್ರಭಾವ ಬೀರ ಬಲ್ಲವರು ಅದರ ಮೂಲಕ ಜನರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬಲ್ಲವರಾಗಿದ್ದಾರೆ. ಆದರೆ ಈ ಬದಲಾವಣೆಗಳು ತಾತ್ಕಾಲಿಕವಾಗಿರುತ್ತವೆ. ಮತ್ತು ವೈಯಕ್ತಿಕವಾಗಿರುತ್ತವೆ. ಅದರಿಂದ ಯಾವುದಾದರೂ ಕ್ರಾಂತಿಕಾರಿ ಪರಿಣಾಮಗಳು ಸಹ ಉಂಟಾಗಲಾರವು. ಆದರೆ ಪ್ರಾರ್ಥನೆಗಳನ್ನು ಅದರ ಶರತ್ತುಗಳನ್ನು ಪಾಲಿಸಿ ಅನುಷ್ಠಿಸಿದರೆ ಅದು ಸಮುದಾಯಗಳ ಬಿಗಡಾಯಿಸಿದ ಅವಸ್ಥೆಯನ್ನು ಸರಿಪಡಿಸಿ ಪುನರುದ್ಧರಿಸುತ್ತದೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಒಂದು ಘಟನೆ ವಿವರಿಸಿದರು. ಅದು ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬರ ಬಗ್ಗೆಯಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: "**ಇಲ್ಮೇ ತವಜ್ಜುಹ್** (ದೃಷ್ಟಿ ಕೇಂದ್ರೀಕರಿಸಿ ಮಾಡುವ ಪ್ರಯೋಗ-ಮೆಸ್ಮರಿಸಂ) ಎಂದರೇನು. ಅದು ಕೇವಲ ಕೆಲವು ಆಟಗಳ ಹೆಸರಾಗಿದೆ. ಆದರೆ ಭೂಮಿ, ಆಕಾಶಗಳನ್ನು ಬದಲಾಯಿಸಬಲ್ಲ ಆಯುಧ ಪ್ರಾರ್ಥನೆ (ದುಆ) ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾದಗಳ ಮೊದಲು **ಬರಾಹೀನೆ ಅಹ್ಮದಿಯಾ** ಎಂಬ ಗ್ರಂಥ ಬರೆದಾಗ ಆ ಕಾಲದ ಸೂಫೀಜನರಲ್ಲಿ ಮತ್ತು ವಿದ್ವಾಂಸರಲ್ಲಿ ಬಹಳ ಪ್ರಸಿದ್ಧಿ ಗಳಿಸಿದರು. ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬರು ಆ ಕಾಲದಲ್ಲಿ ಅಲ್ಲಾಹನ ಸಾಮೀಪ್ಯಗಳಿಸಿದ ಹಿರಿಯರಲ್ಲಿ ಒಬ್ಬರಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ವಿಜ್ಞಾಪನೆಗಳನ್ನು ಓದಿದಾಗ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಪತ್ರ ವ್ಯವಹಾರವನ್ನು ಪ್ರಾರಂಭಿಸಿದರು. ಅವರು ಹೀಗೆ ಬರೆದರು: ತಾವು ಯಾವಾಗಲಾದರು ಲುಧಿಯಾನಕ್ಕೆ ಸಂದರ್ಶನ ನೀಡುವುದಿದ್ದರೆ ನನಗೆ ಅದರ ಬಗ್ಗೆ ಮುಂಚಿತವಾಗಿ ತಿಳಿಸಿರಿ ಎಂದು. ಅದೇ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲುಧಿಯಾನಕ್ಕೆ ಹೋಗುವ ಸಂದರ್ಭ ಉಂಟಾಯಿತು. ಸೂಫೀ ಅಹ್ಮದ್ ಜಾನ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸತ್ಕಾರ ನೀಡಿದರು. ಸತ್ಕಾರದ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾಸ ಸ್ಥಳಕ್ಕೆ ಹೊರಟಾಗ ಸೂಫೀ ಸಾಹೇಬರು ಸಹ ಅವರ ಜೊತೆ ಹೊರಟರು. ಮಾರ್ಗ ಮಧ್ಯೆ ಸೂಫೀ ಸಾಹೇಬರು ಹೇಳಿದರು- ನಾನು ಇಂತಿಷ್ಟು ವರ್ಷ ರತರ್ ಚತ್ತರ್ ವಾಲರ ಸೇವೆ ಮಾಡಿದೆ. ಅನಂತರ ನನಗೆ ಎಷ್ಟು ಶಕ್ತಿ ಲಭಿಸಿದೆ ಎಂದರೆ ನನ್ನ ಹಿಂದೆ ಬರುತ್ತಿರುವ ಮನುಷ್ಯನ ಮೇಲೆ ನನ್ನ ಶ್ರದ್ಧೆ ಕೇಂದ್ರೀಕರಿಸಿದರೆ ಅವನು ಬಿದ್ದು ಬಿಡುವನು. ಮತ್ತು ನಡುಗಲು ತೊಡಗುವನು. ಎಂದರೆ 'ಮೆಸ್ಮರಿಸಂ' ಪ್ರಯೋಗಿಸಿ ಹೀಗೆ ಮಾಡ ಬಲ್ಲೆನು. ಈ ಮಾತು ಆಲಿಸಿದ ಕೂಡಲೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಂತು ಬಿಟ್ಟರು ಮತ್ತು ತಾನು ಹಿಡಿದಿದ್ದ ಬೆತ್ತದಿಂದ ನೆಲವನ್ನು ಕೊರೆಯಲು ತೊಡಗಿದರು ಮತ್ತು ಹೇಳಿದರು- ಸೂಫೀ ಸಾಹೇಬರೇ, ಆ ಮನುಷ್ಯ ನೆಲದಲ್ಲಿ ಬಿದ್ದು ಬಿಟ್ಟರೆ ಅದರಿಂದ ತಮಗೆ ಸಿಗುವ ಲಾಭವಾದರೂ ಏನು? ಅವನಿಗೆ ಸಿಗುವ ಲಾಭವೇನು? ಸೂಫೀ ಸಾಹೇಬರು ಅಲ್ಲಾಹನ ಸಾಮೀಪ್ಯ ಗಳಿಸಿದವರಾಗಿದ್ದರು. ಅಲ್ಲಾಹನು ಅವರನ್ನು ದೂರ ದೃಷ್ಟಿ ನೀಡಿ ಅನುಗ್ರಹಿಸಿದ್ದನು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತು ಕೇಳಿದ ಕೂಡಲೆ ಅದರ ಪ್ರಭಾವ ಅವರ ಮೇಲೆ ಉಂಟಾಯಿತು. ಅವರು ಹೇಳಿದರು: ನಾನು ಇಂದಿನಿಂದ ಈ ವಿದ್ಯೆಯ ಪ್ರಯೋಗ ಬಿಟ್ಟುಬಿಡುತ್ತೇನೆ. ಇದು ಲೌಕಿಕ ವಿಷಯವೆಂದು ನನಗೆ ತಿಳಿಯಿತು. ಇದು ಧಾರ್ಮಿಕವಾದ ವಿಷಯವೇನೂ ಅಲ್ಲ ಎಂದು ನನಗೆ ಈಗ ಮನವರಿಕೆಯಾಯಿತು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಸೂಫೀ ಸಾಹೇಬರಿಗೆ ಅಲ್ಲಾಹನು ದೂರ ದೃಷ್ಟಿ ನೀಡಿದ್ದನು ಎಂಬುದಕ್ಕೆ ಆಶ್ಚರ್ಯಕರವಾದ ಒಂದು ಪುರಾವೆ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ **ಬರಾಹೀನೆ ಅಹ್ಮದಿಯಾ** ಗ್ರಂಥ ಬರೆದಾಗ ಸೂಫೀ ಸಾಹೇಬರಿಗೆ ಮನವರಿಕೆ ಆಗಿತ್ತು ಈ ಗ್ರಂಥದ ಲೇಖಕ ಮುಂದೆ ವಾಗ್ದತ್ತ ಮಸೀಹ್ ಆಗಿ ನಿಯೋಜಿಸಲ್ಪಡುವರೆಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೂಡ ತಾನು ವಾದ ಮಾಡಲಿರುವೆ ಎಂದು ತಿಳಿಯದೆ ಇದ್ದ ಆ ಸಮಯದಲ್ಲಿ ಅವರಿಗೆ ಬರೆದ ಒಂದು ಪತ್ರದಲ್ಲಿ ಸೂಫೀ ಸಾಹೇಬರು ಹೀಗೆ ಒಂದು ಪದ್ಯ ಬರೆದರು:

**ಹಮ್ ಮರೀಝೋಂ ಕಿ ಹೈ ತುಮ್ ಹೀ ಪೆ ನಿಗಾಹ್**
**ತುಮ್ ಮಸೀಹಾ ಬನೋ ಖುದಾ ಕೇ ಲಿಯೇ.**

"ರೋಗಿಗಳಾದ ನಮಗೆ ನಿಮ್ಮ ಮೇಲೆಯೇ ದೃಷ್ಟಿ ಇದೆ.
ಅಲ್ಲಾಹನಿಗೋಸ್ಕರ ನೀವು ಮಸೀಹಾ (ಚಿಕಿತ್ಸಕ) ಆಗಿರಿ."

ಅವರು ಕಶ್ಫ್ (ದಿವ್ಯ ದರ್ಶನ) ಗಳಿಸುವವರಾಗಿದ್ದರೆಂದು ಇದರಿಂದ ತಿಳಿಯುತ್ತದೆ. ಈ ವ್ಯಕ್ತಿ ಮಸೀಹ್ ಮೌಊದ್ ಆಗಲಿರುವರೆಂದು ಅಲ್ಲಾಹನು ಅವರಿಗೆ ಮುಂಚಿತವಾಗಿ ತಿಳಿಸಿದ್ದನು. ಸೂಫೀ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಹ್‌ದೀ ಮಸೀಹ್ ಎಂದು ವಾದಿಸುವ ಮೊದಲೇ ನಿಧನ ಹೊಂದಿದ್ದರು. ಅವರು ತನ್ನ ಮಕ್ಕಳಿಗೆ ಹೀಗೆ ವಸಿಯ್ಯತ್ ಹೇಳಿದ್ದರು: ಹಝ್ರತ್ ಮಿರ್ಝಾ ಸಾಹೇಬರು ವಾದಿಸಿದರೆ ಅವರನ್ನು ನಂಬುವುದರಲ್ಲಿ ತಡಮಾಡಬಾರದು."

ಹಝ್ರತ್ ಸೂಫೀ ಸಾಹೇಬರ ಪುತ್ರಿಯನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ವಿವಾಹವಾಗಿದ್ದರು ಎಂದು ಸಹ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆದಿದ್ದಾರೆ. ಮೆಸ್ಮರಿಸಮ್‌ಗೆ ಸಂಬಂಧಿಸಿ ಮತ್ತೊಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿರುದ್ಧ ಮೆಸ್ಮರಿಸಂ ವಿದ್ಯೆ ಪ್ರಯೋಗಿಸಿದವನು ಅದರಲ್ಲಿ ಸೋತ ಬಗ್ಗೆ ಮತ್ತು ಒಂದು ದೃಷ್ಟಾಂತ ಪ್ರಕಟವಾದ ಬಗ್ಗೆ ಅವರು ಹೀಗೆ ಬರೆದಿದ್ದಾರೆ:

"ಲಾಹೋರಿನ ಸರಕಾರಿ ಕಚೇರಿಯಲ್ಲಿ ಅಕೌಂಟೆಂಟ್ ಆಗಿದ್ದ ಒಬ್ಬ ಹಿಂದು ಮೆಸ್ಮರಿಸಂ ವಿದ್ಯೆಯಲ್ಲಿ ನಿಷ್ಣಾತನಾಗಿದ್ದನು. ಲಾಹೋರಿನಿಂದ ಖಾದಿಯಾನಿಗೆ ಆಗಮಿಸಿದ ಒಂದು ಮದುವೆಯ ದಿಬ್ಬಣದಲ್ಲಿ ಆತನು ಸಹ ಬಂದಿದ್ದನು. ತಾನು ಮಿರ್ಝಾ ಸಾಹೇಬರ ಮೇಲೆ ಮೆಸ್ಮರಿಸಂ ಪ್ರಯೋಗಿಸಿ ಅವರು ನೃತ್ಯ ಮಾಡುವಂತೆ ಮಾಡುವೆನೆಂದು ಅವನು ಯೋಚಿಸಿದನು (ನಊದು‌ಬಿಲ್ಲಾಹ್). ಅವನು ಸ್ವತಃ ಹೀಗೆ ಹೇಳಿದ್ದಾನೆ: 'ನಾನು ಒಂದು ವಿವಾಹದ ಸಮಾರಂಭಕ್ಕೆ ಸಂಬಂಧಿಸಿ ಖಾದಿಯಾನಿಗೆ ಹೋಗಿದ್ದೆ. ಮಿರ್ಝಾ ಸಾಹೇಬರು ತನ್ನ ಶಿಷ್ಯರೊಂದಿಗೆ ಕುಳಿತಿದ್ದಾಗ ನಾನು ಬಾಗಿಲ ಬಳಿ ಕುಳಿತು ಅವರ ಮೇಲೆ ನನ್ನ ಶ್ರದ್ಧೆ ಕೇಂದ್ರೀಕರಿಸಲು ತೊಡಗಿದೆ. ಅವರು ತನ್ನ ಶಿಷ್ಯರಿಗೆ ಉಪದೇಶ ನೀಡುತ್ತಿದ್ದರು. ನಾನು ಅವರ ಮೇಲೆ ಮೆಸ್ಮರಿಸಂ ಪ್ರಯೋಗಿಸಿದಾಗ ಅದು ಅವರ ಮೇಲೆ ಯಾವ ಪ್ರಭಾವ ಸಹ ಬೀರಲಿಲ್ಲ. ಅವರು ಉಪದೇಶ ನೀಡುತ್ತಾ ಇದ್ದರು. ನಾನು ಆಗ ಭಾವಿಸಿದೆ ಮಿರ್ಝಾ ಸಾಹೇಬರ ಇಚ್ಛಾಶಕ್ತಿ ಹೆಚ್ಚು ಬಲಿಷ್ಠವಾಗಿದೆ. ಆದುದರಿಂದ ನಾನು ಇನ್ನಷ್ಟು ಬಲವತ್ತಾಗಿ ಶ್ರದ್ಧೆ ಕೇಂದ್ರೀಕರಿಸಿದೆ. ಅದು ಸಹ ಪ್ರಯೋಜನಕರವಾಗಲಿಲ್ಲ. ಆಗ ನಾನು ಭಾವಿಸಿದೆ ಮಿರ್ಝಾ ಸಾಹೇಬರ ಇಚ್ಛಾಶಕ್ತಿ ಬಹಳ ಪ್ರಬಲವಾಗಿದೆ ಎಂದು. ಹಾಗೆ ನಾನು ನನ್ನ ಎಲ್ಲ ಶಕ್ತಿಗಳನ್ನು ಬಳಸಿ ಪ್ರಭಾವ ನೀಡಿದೆ. ಆಗ ನಾನು ಫಕ್ಕನೆ ಒಂದು ಸಿಂಹ ನನ್ನ ಮುಂದೆ ಕುಳಿತಿದೆ, ಅದು ನನ್ನ ಮೇಲೆ ಆಕ್ರಮಣ ಮಾಡಲಿದೆ ಎಂದು ಕಂಡೆನು. ನಾನು ಭಯಭೀತನಾಗಿ ಅಲ್ಲಿಂದ ಎದ್ದು ನನ್ನ ಪಾದರಕ್ಷೆಗಳನ್ನು ಎತ್ತಿಕೊಂಡು ಓಡಿದೆ. ನಾನು ಬಾಗಿಲಿಗೆ ತಲುಪಿದಾಗ ಮಿರ್ಝಾ ಸಾಹೇಬರು ಶಿಷ್ಯರೊಂದಿಗೆ ನನ್ನ ಬಗ್ಗೆ ವಿಚಾರಿಸಲು ಹೇಳಿದರು. ಒಬ್ಬ ಶಿಷ್ಯ ಬಂದು ಮಸ್‌ಜಿದ್‌ನ ಕೆಳಗಿನ ಅಂಗಳದಲ್ಲಿ ನನ್ನನ್ನು ಹಿಡಿದರು. ಆಗ ನಾನು ಬಹಳ ಗಾಬರಿಗೊಂಡಿದ್ದೆ. ನಾನು ಹೇಳಿದೆ: ಈಗ ನನ್ನನ್ನು ಬಿಟ್ಟುಬಿಡಿರಿ ನನ್ನ ಪ್ರಜ್ಞೆ ಸರಿಯಾಗಿಲ್ಲ. ನಂತರ ನಾನು ಎಲ್ಲ ಸಂಭವ ವಿವರಿಸಿ ಬರೆದು ಮಿರ್ಝಾ ಸಾಹೇಬರಿಗೆ ಕಳುಹಿಸುವೆನು ಎಂದು ಹೇಳಿದೆ. ಆಗ ನನ್ನನ್ನು ಬಿಟ್ಟುಬಿಡಲಾಯಿತು. ಅನಂತರ ನಾನು ಎಲ್ಲ ವಿಷಯಗಳನ್ನು ಬರೆದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕಳುಹಿಸಿದೆನು: ನಾನು ತಮಗೆ ಅಗೌರವ ತೋರಿಸಿದ್ದೇನೆ. ನಾನು ತಮ್ಮ ಆಧ್ಯಾತ್ಮಿಕ ಪದವಿಯನ್ನು ಗುರುತಿಸಲಿಲ್ಲ. ನನ್ನನ್ನು ಕ್ಷಮಿಸಿರಿ ಎಂದು ಮನವಿ ಮಾಡಿಕೊಂಡೆನು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಪರಿಪೂರ್ಣ ವಿಶ್ವಾಸವನ್ನು ಹೊಂದಿದ ಸತ್ಯವಿಶ್ವಾಸಿಗೆ ಅಲ್ಲಾಹನು ನೀಡುವ ಇಚ್ಛಾಶಕ್ತಿ ಮತ್ತು ಮಾನವನ ಸ್ವಂತ ಇಚ್ಛಾಶಕ್ತಿ ಇವುಗಳ ಮಧ್ಯೆ ಇರುವ ದೂರ ಎರಡು ಪೂರ್ವಗಳ ಮಧ್ಯೆ ಇರುವ ದೂರದಷ್ಟಿದೆ."

ಸಾಮುದಾಹಿಕ ಪ್ರಗತಿಗೆ ಏನೆಲ್ಲಾ ಆವಶ್ಯಕವಾಗಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಧಾರ್ಮಿಕ ವಿಷಯಗಳ ಬಗ್ಗೆ ಎಂತಹ ಅಭಿಮಾನವಿತ್ತು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನದ ಬಗ್ಗೆ ಎಂತಹ ಧಾರ್ಮಿಕ ಅಭಿಮಾನವಿತ್ತು ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆಯುತ್ತಾರೆ:

ಸಾಮುದಾಯಿಕ ಅಭಿವೃದ್ಧಿಗೋಸ್ಕರ ಎಲ್ಲ ಸತ್ಯಗಳನ್ನು ತನ್ನೊಳಗೆ ಅಳವಡಿಸಿಕೊಳ್ಳಬೇಕಾದುದು ಆವಶ್ಯಕವಾಗಿದೆ. ಕೇವಲ **ವಫಾತೆ ಮಸೀಹ್** ನಂಬಿದರೆ ಸಾಕಾಗಲಾರದು. **ವಫಾತೆ ಮಸೀಹ್** ಕುರಿತು ನಾವು ನಂಬಿಕೆಯಿಡುವುದು ಯಾಕಾಗಿ? ಈಸಾ ಅಲೈಹಿಸ್ಸಲಾಮರು ಜೀವಿಸಿರುವರೆಂಬ ನಂಬಿಕೆ ನಮ್ಮನ್ನು ನೋಯಿಸುವುದೇಕೆಂದರೆ ಇದರಿಂದ ಹಝ್ರತ್ ಈಸಾ ಮಸೀಹ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಶ್ರೇಷ್ಠರೆಂದಾಗುತ್ತದೆ. ಆದರೆ ವಾಸ್ತವವೇನೆಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾನರಾಗಿ ಯಾವ ಪ್ರವಾದಿಯೂ ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಾಸ್ತವಿಕವಾಗಿ ಸಮಸ್ತ ಲೋಕವನ್ನು ಸುಧಾರಣೆ ಮಾಡಿದವರಾಗಿದ್ದಾರೆ. ಅಂತಹ ಮಹಾನುಭಾವರಿಗಿಂತ ಯೇಸು ಮಸೀಹರು ಮೇಲಿನ ಸ್ಥಾನದಲ್ಲಿದ್ದಾರೆಂದು **ಹಯಾತೆ ಮಸೀಹ್** ನಂಬಿಕೆಯಿಂದ ಸಾಬೀತಾಗುತ್ತದೆ. ಇದು ಇಸ್ಲಾಮೀ ನಂಬಿಕೆಗಳಿಗೆ ವಿರುದ್ಧವಾಗಿದೆ.

ಈಸಾ ಮಸೀಹ್ ಜೀವಿಸಿರುವರೆಂಬ ನಂಬಿಕೆ ನಮಗೆ ಅಸಹ್ಯವಾಗಲು ಮತ್ತೊಂದು ಕಾರಣವೇನೆಂದರೆ, ಅದರಿಂದ ಏಕದೇವ ವಿಶ್ವಾಸಕ್ಕೂ ಭಂಗ ಉಂಟಾಗುತ್ತದೆ. ಈ ಎರಡು ಕಾರಣಗಳಿಂದ ನಾವು ಈಸಾ ಮಸೀಹರ ಮರಣದ ಬಗ್ಗೆ ಒತ್ತಿ ಹೇಳಬೇಕಾಗಿದೆ. ಇಂತಹ ವಿಷಯಗಳಿಲ್ಲದಿರುತ್ತಿದ್ದರೆ ಈಸಾ ಮಸೀಹ್ ಆಕಾಶದಲ್ಲಿದ್ದರೂ ಭೂಮಿಯಲ್ಲಿದ್ದರೂ ನಮಗೆ ಯಾವ ಪರಿವೆಯೂ ಇರುತ್ತಿರಲಿಲ್ಲ. ಆದರೆ ಈಸಾ ಮಸೀಹ್ ಆಕಾಶಕ್ಕೇರಿ ಹೋಗುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನಕರವಾಗುವುದಾದರೆ, ಹಾಗೂ ಅದು ಏಕ ದೇವ ವಿಶ್ವಾಸಕ್ಕೆ ವಿರುದ್ಧವಾಗಿದ್ದರೆ ನಾವು ಈ ನಂಬಿಕೆಯನ್ನು ಹೇಗೆ ತಾನೆ ಸಹಿಸ ಬಲ್ಲೆವು? ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೋಡಿರುವೆವು– ಅವರು **ವಫಾತೆ ಮಸೀಹ್** ಬಗ್ಗೆ ಮಾತನಾಡುವಾಗ ಅವರೆಷ್ಟು ಆವೇಶಭರಿತರಾಗುತ್ತಿದ್ದರೆಂದರೆ ಅವರ ಶರೀರ ನಡುಗುತ್ತಿತ್ತು. ಅವರ ಧ್ವನಿಯಲ್ಲಿ ಎಂತಹ ವೈಭವವಿರುತ್ತಿತ್ತೆಂದರೆ ಅವರು ಈಸಾ ಮಸೀಹರು ಜೀವಂತವಾಗಿರುವರೆಂಬ ನಂಬಿಕೆಯನ್ನು ಕತ್ತರಿಸಿ ಛೀಮ ಮಾಡುವಂತೆ ಕಾಣುತ್ತಿತ್ತು. ಈ ವಿಷಯದ ಕುರಿತು ಅವರ ಭಾಷಣದಲ್ಲಿ ಒಂದು ವಿಶಿಷ್ಟ ಆವೇಶ ಕಾಣಿಸುತ್ತಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಿಂಹಾಸನದಲ್ಲಿ ಈಸಾ ಮಸೀಹ್ ಕುಳಿತು ಅವರನ್ನು ಅಪಮಾನಿಸಿರುವಂತೆಯೂ ಮತ್ತು ಆ ಸಿಂಹಾಸನವನ್ನು ಮರಳಿ ಪಡೆದುಕೊಳ್ಳಲು ಹೋರಾಡುವಂತೆಯೂ ಭಾಸವಾಗುತ್ತಿತ್ತು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೊಂದಿದ್ದ ಧಾರ್ಮಿಕ ಅಭಿಮಾನದ ಸ್ಥಿತಿಯಾಗಿತ್ತು.

ಅಲ್ಲಾಹನು ಯಾರನ್ನಾದರೂ ಉನ್ನತ ಸ್ಥಾನಕ್ಕೇರಿಸಿದರೆ ಅವರಿಗೆ ಯಾವ ರೀತಿ ಮಾರ್ಗದರ್ಶನ ನೀಡುತ್ತಾನೆಂದರೆ ಜನರ ಆಂತರಿಕ ಸ್ಥಿತಿಯ ಬಗ್ಗೆ ಸಹ ಅಲ್ಲಾಹನು ಅವರಿಗೆ ತಿಳಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ

ಪ್ರಸ್ತಾಪನೆಯ ಕುರಿತು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಅಲ್ಲಾಹನು ಸ್ವತಃ ಒಬ್ಬ ವ್ಯಕ್ತಿಯನ್ನು ಉನ್ನತ ಸ್ಥಾನಕ್ಕೆ ಏರಿಸಿದರೆ ಅವರಿಗೆ ಅಲ್ಲಾಹನ ಕಡೆಯಿಂದ ಮಾರ್ಗದರ್ಶನ ಸಹ ಲಭಿಸುತ್ತದೆ. ಅವರಿಗೆ ರಹಸ್ಯ ಮಾರ್ಗದರ್ಶನ ಲಭಿಸುತ್ತದೆ. ಅದು ಇಲ್‌ಹಾಮ್ ಎಂದು ಹೇಳಲಾಗದು. ಅದೇ ರೀತಿ ಅದನ್ನು ಇಲ್‌ಹಾಮ್‌ನಿಂದ ಬೇರೆಯಾದುದೆಂದು ಸಹ ನಾವು ಹೇಳಲಾರೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಿದ್ದರು: 'ಹಲವು ಜನರು ನನ್ನ ಬಳಿಗೆ ಬಂದಾಗ ಅವರಿಂದ ಎಂತಹ ಪ್ರಭೆ ಹೊರಡುವುದನ್ನು ನಾನು ಕಾಣುತ್ತೇನೆಂದರೆ ನನಗೆ ಅವರ ಒಳಗಿರುವ ನ್ಯೂನತೆ ಮತ್ತು ಒಳಿತು ತಿಳಿಯುತ್ತದೆ. ಆದರೆ ಅವರ ನ್ಯೂನತೆ ಬಗ್ಗೆ ತಿಳಿಸಲು ನನಗೆ ಅನುಮತಿ ಇರುವುದಿಲ್ಲ. ಮನುಷ್ಯನು ತನ್ನ ಪ್ರಕೃತಿಯ ಗುಣವನ್ನು ಸ್ವತಃ ಕಾರ್ಯರೂಪಕ್ಕೆ ತರುವ ತನಕ ಅಪರಾಧಿಯಾಗಲಾರ ಎನ್ನುವುದು ಅಲ್ಲಾಹನ ನಡೆವಳಿಕೆಯಾಗಿದೆ. ಆದುದರಿಂದ ಪ್ರವಾದಿಗಳು ಮತ್ತು ಅವರ ನೆರಳಿನ ಸ್ಥಾನದಲ್ಲಿರುವವರು ಕೂಡಾ ಯಾವುದೇ ವ್ಯಕ್ತಿಯ ಆಂತರಿಕ ನ್ಯೂನತೆ ಬಗ್ಗೆ ಯಾರೊಂದಿಗೂ ಪ್ರಸ್ತಾಪಿಸಲಾರರು. ಆ ನ್ಯೂನತೆ ಸ್ವಯಂ ಪ್ರಕಟವಾಗುವಾಗ ಹೊರತು.' 1904ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲಾಹೋರಿಗೆ ಹೋದಾಗ ಅಲ್ಲಿ ಒಂದು ಸಭೆಯಲ್ಲಿ ಭಾಷಣ ಮಾಡಿದರು. ಆ ಭಾಷಣವನ್ನು ಶೇಖ್ ರಹ್ಮತುಲ್ಲಾ ಸಾಹೇಬ್ ಎಂಬ ಅಹ್ಮದಿಯೇತರ ವಕೀಲ್ ಆಲಿಸಿದ್ದರು. ಅವರು ಹೇಳುತ್ತಾರೆ: ಭಾಷಣ ಮಾಡುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ತಲೆಯಿಂದ ಒಂದು ಪ್ರಕಾಶದ ಸ್ತಂಭ ಆಕಾಶದ ಕಡೆಗೆ ಹೋಗುವುದನ್ನು ಕಂಡೆನು. ನನ್ನ ಸಮೀಪ ಕುಳಿತಿದ್ದ ನನ್ನ ಸ್ನೇಹಿತ ಸಹ ಹೇಳಿದರು ಪ್ರಕಾಶದ ಒಂದು ಸ್ತಂಭ ಮಿರ್ಝಾ ಸಾಹೇಬರ ತಲೆಯಿಂದ ಹೊರಟು ಆಕಾಶಕ್ಕೆ ತಲಪುತ್ತಿದೆ ಎಂದು. ಈ ದೃಶ್ಯ ಕಂಡ ನಂತರ ಶೇಖ್ ರಹ್ಮತುಲ್ಲಾ ಸಾಹೇಬರು ಅದೇ ದಿನ ಬೈಅತ್ ಮಾಡಿದರು."

ಇಂತಹ ದೃಷ್ಟಾಂತಗಳನ್ನು ಕಂಡು ಅನೇಕರು ವಿಶ್ವಾಸಿಗಳಾದರು. ದೃಷ್ಟಾಂತಗಳು ವಿವಿಧ ರೀತಿಗಳಲ್ಲಿ ಇರುತ್ತವೆ. ಅವುಗಳನ್ನು ಅಲ್ಲಾಹನು ಪ್ರಕಟಿಸುತ್ತಾನೆ. ಇದರ ಮೊದಲು ಸಹ ನಾನು ಇವುಗಳ ಬಗ್ಗೆ ಪ್ರಸ್ತಾಪಿಸಿದ್ದೇನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಹೇಳಿದರು: "ಒಬ್ಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೀಗೆ ಬರೆದಿದ್ದರು: ನನ್ನ ಸಹೋದರಿಯ ಬಳಿಗೆ 'ಜಿನ್ನ್' ಬರುತ್ತದೆ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದಕ್ಕೆ ಹೀಗೆ ಉತ್ತರ ಬರೆದರು: 'ನೀವು ಜಿನ್ನ್‌ಗಳಿಗೆ ಹೀಗೆ ಸಂದೇಶ ನೀಡಿರಿ. ಒಬ್ಬ ಮಹಿಳೆಗೆ ಏಕೆ ತೊಂದರೆ ಕೊಡುತ್ತಾ ಇದ್ದೀರಿ. ಯಾರಿಗಾದರೂ ತೊಂದರೆ ಕೊಡಬೇಕೆಂದಿದ್ದರೆ ಮೌಲವಿ ಮುಹಮ್ಮದ್ ಹುಸ್ಸೈನ್ ಬಟಾಲವಿ ಅಥವಾ ಮೌಲವಿ ಸನಾಉಲ್ಲಾಹ್ ಸಮೀಪಕ್ಕೆ ಹೋಗಿ ಅವರಿಗೆ ತೊಂದರೆ ಕೊಡಿರಿ. ಒಬ್ಬ ಬಡ ಮಹಿಳೆಯನ್ನು ಸತಾಯಿಸುವುದರಿಂದ ಸಿಗುವ ಲಾಭವಾದರೂ ಏನು? ಎಂದು ಹೇಳಿರಿ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಲವಾರು ದೃಷ್ಟಾಂತಗಳನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ನಾನು ನಿಮ್ಮ ಮುಂದಿಡುತ್ತೇನೆ. ಅವುಗಳಲ್ಲಿ ಒಂದು ಹೀಗಿದೆ: ಅಬ್ದುಲ್ ಕರೀಮ್ ಎಂಬ ಓರ್ವ ಯುವಕ ಖಾದಿಯಾನ್‌ನಲ್ಲಿ ಶಾಲೆಯಲ್ಲಿ ಕಲಿಯುತ್ತಿದ್ದಾಗ ಅವರನ್ನು ಹುಚ್ಚುನಾಯಿ ಕಚ್ಚಿತು. ಅವರನ್ನು ಚಿಕಿತ್ಸೆಗೋಸ್ಕರ ಕಸೌಲಿಗೆ ಕಳುಹಿಸಲಾಯಿತು. ಆ ಚಿಕಿತ್ಸೆ ಫಲಕಾರಿ ಆದ ಹಾಗೆ ತೋರಿತು. ಆದರೆ ಆತ ಮರಳಿ ಬಂದ ಸ್ವಲ್ಪ ದಿನಗಳ ನಂತರ ರೋಗ ಮರುಕಳಿಸಿತು. ಕಸೌಲಿಗೆ ತಂತಿ ಸಂದೇಶ ಕಳುಹಿಸಿ ಯಾವುದಾದರೂ ಚಿಕಿತ್ಸೆ ಸೂಚಿಸಲು ಅಪೇಕ್ಷಿಸಲಾಯಿತು. ಆದರೆ, ಅಲ್ಲಿಂದ ಹೀಗೆ ಉತ್ತರ ಲಭಿಸಿತು. SORRY, NOTHING CAN BE DONE FOR ABDUL KARIM. ಅಂದರೆ, 'ಕ್ಷಮಿಸಿ– ಅಬ್ದುಲ್ ಕರೀಮನಿಗೆ ಇನ್ನು ಯಾವ ಚಿಕಿತ್ಸೆಯೂ ಇರುವುದಿಲ್ಲ'. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಈ ವಿಷಯ ತಿಳಿಸಲಾಯಿತು. ಅವರು ರೋಗ ಶಮನಕ್ಕಾಗಿ ಪ್ರಾರ್ಥಿಸಿದರು. ಅದರ ಫಲಸ್ವರೂಪವಾಗಿ ಅಲ್ಲಾಹನು ಅಬ್ದುಲ್ ಕರೀಮರಿಗೆ ರೋಗಶಮನ ನೀಡಿದನು. ಪ್ರಕೃತಿ ನಿಯಮಗಳ ಮೇಲೆ ಒಂದು ಶಕ್ತಿಶಾಲಿ ಅಸ್ತಿತ್ವವಿದೆ. ಆ ಅಸ್ತಿತ್ವದ ಕೈಯಲ್ಲಿ ರೋಗಶಮನವಿದೆ ಎಂದು ಸಾಬೀತಾಯಿತು.

ಇನ್ನೊಂದು ಘಟನೆ ಹೀಗಿದೆ: ಅಮೇರಿಕದಿಂದ ಇಬ್ಬರು ಪುರುಷರು ಮತ್ತು ಒಬ್ಬ ಮಹಿಳೆ ಖಾದಿಯಾನಿಗೆ ಬಂದಿದ್ದರು. ಅವರ ಪೈಕಿ ಒಬ್ಬ ಪುರುಷ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅವರ ವಾದಗಳ ಬಗ್ಗೆ ಚರ್ಚಿಸಿದರು. ಮಾತಿನ ಮಧ್ಯೆ ಈಸಾ ಮಸೀಹರು ದೇವನೆಂದು ಆ ಪುರುಷ ಹೇಳಿದರು. ಅದಕ್ಕೆ ಸಾಕ್ಷ್ಯಾಧಾರವೇನು? ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೇಳಿದರು: ಆ ವ್ಯಕ್ತಿ ಉತ್ತರ ಹೇಳಿದರು ಈಸಾ ಮಸೀಹ್ ಅದ್ಭುತ ಕೃತ್ಯಗಳನ್ನು ಮಾಡಿದ್ದರು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ಅದ್ಭುತ ಕೃತ್ಯ ನಾವು ಸಹ ತೋರಿಸುತ್ತೇವೆ ಎಂದು. ಆ ವ್ಯಕ್ತಿ ಕೇಳಿದರು: ಯಾವುದಾದರೂ ಅದ್ಭುತ ಕೃತ್ಯ ನನಗೆ ತೋರಿಸಿರಿ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ನೀವೇ ನನ್ನ ಒಂದು ಅದ್ಭುತ ದೃಷ್ಟಾಂತ ಆಗಿದ್ದೀರಿ ಎಂದು. ಆ ವ್ಯಕ್ತಿ ಗಾಬರಿಗೊಂಡು ಕೇಳಿದರು– ನಾನು ಅದ್ಭುತ ದೃಷ್ಟಾಂತ ಆಗುವುದು ಹೇಗೆ? ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು:

'ಖಾದಿಯಾನ್ ಒಂದು ಅತ್ಯಂತ ಅಜ್ಞಾತ ಗ್ರಾಮವಾಗಿತ್ತು. ಇಲ್ಲಿ ಸಾಮಾನ್ಯ ಆಹಾರ ಸಾಮಾಗ್ರಿ ಸಹ ದೊರೆಯುತ್ತಿರಲಿಲ್ಲ. ಒಂದು ರೂಪಾಯಿಯ ಗೋಧಿ ಹಿಟ್ಟು ಸಹ ಸಿಗಲಾರದಾಗಿತ್ತು. ಇಂತಹ ಸಂದರ್ಭದಲ್ಲಿ ಅಲ್ಲಾಹನು ನನಗೆ ತಿಳಿಸಿದನು– ನಿನ್ನ ಹೆಸರನ್ನು ಲೋಕದಾದ್ಯಂತ ಉನ್ನತ ಗೊಳಿಸುವೆನು. ಲೋಕದಲ್ಲಿ ನೀನು ಹೆಸರುವಾಸಿಯಾಗುವೆ. ನಾಲ್ಕು ದಿಕ್ಕುಗಳಿಂದಲೂ ಜನರು ನಿನ್ನ ಬಳಿಗೆ ಆಗಮಿಸುವರು. ಅವರಿಗೆ ಸುಖ ಸೌಲಭ್ಯಕ್ಕೋಸ್ಕರ ಸಾಮಾಗ್ರಿಗಳು ಸಹ ಇಲ್ಲಿಗೆ ಬರುವುವು. **ಯಅ್‌ತೂನ ಮಿನ್ ಕುಲ್ಲಿ ಫಜ್ಜಿನ್ ಅಮೀಖ್.** ಎಲ್ಲ ದೇಶಗಳಿಂದ ನಿನ್ನ ಬಳಿಗೆ ಜನರು ಆಗಮಿಸುವರು. **ಯಅ್‌ತೀಕ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್.** ಎಷ್ಟು ಜನರು ಮತ್ತು ಸಾಮಾಗ್ರಿಗಳು ಬರುವುವು ಎಂದರೆ ಅವರು ಆಗಮಿಸುವ ಮಾರ್ಗಗಳಲ್ಲಿ ಕುಳಿ ಬೀಳುವುವು ಎಂದು ಅಲ್ಲಾಹನು ನನಗೆ ತಿಳಿಸಿದ್ದನು. ನೀವು ನೋಡಿರಿ, ಮಾರ್ಗಗಳಲ್ಲಿ ಎಷ್ಟು ಹೊಂಡಗಳಿವೆ!

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಬರೆದಿದ್ದಾರೆ: ನನ್ನ ಸತ್ಯಕ್ಕೆ ಸಾಕ್ಷ್ಯವಾಗಿ ಲಕ್ಷಾಂತರ ದೃಷ್ಟಾಂತಗಳು ತೋರಿಸಲ್ಪಟ್ಟಿವೆ. ಲೆಕ್ಕ ಮಾಡಲು ಅಸಾಧ್ಯವಾಗಿರುವಷ್ಟು ದೃಷ್ಟಾಂತಗಳು ತೋರಿಸಲ್ಪಟ್ಟಿವೆ. ಅನೇಕ ಅವಿವೇಕಿಗಳು

ಹೇಳುತ್ತಾರೆ: ಮಿರ್ಝಾ ಸಾಹೇಬರ ಇಲ್‌ಹಾಮ್‌ಗಳೇ ಲಕ್ಷಗಟ್ಟಲೆ ಇಲ್ಲವಲ್ಲ; ಹೀಗಿರುವಾಗ ದೃಷ್ಟಾಂತಗಳು ಲಕ್ಷಾಂತರ ಆಗುವುದು ಹೇಗೆ? ಎಂದು. ಆದರೆ ಬುದ್ಧಿಶಾಲಿಗಳಾದವರು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬಲ್ಲರು – ಒಂದು ಇಲ್‌ಹಾಮ್‌ನಿಂದಲೇ ಲಕ್ಷಾಂತರ ದ್ರಷ್ಟಾಂತಗಳು ಪ್ರಕಟವಾಗಬಲ್ಲವು ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಸತ್ಯಕ್ಕೆ ಸಾಕ್ಷ್ಯವಾಗಿ ಅಲ್ಲಾಹನು ಲಕ್ಷಾಂತರ ದೃಷ್ಟಾಂತಗಳನ್ನು ಪ್ರಕಟಿಸಿದ್ದಾನೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ ಪ್ರಕಟಿಸಲು ಅಲ್ಲಾಹನು ಪ್ರಕಟಿಸಿದ ದೃಷ್ಟಾಂತಗಳನ್ನು ಎಣಿಸಲು ಸಾಧ್ಯವಿಲ್ಲ. ಆದರೆ ಇದು ಯಾರಿಗೆ ಮನವರಿಕೆ ಆಗುವುದು. ಬುದ್ಧಿಶಾಲಿಗಳಾದವರು ಮಾತ್ರ ಇದನ್ನು ಮನವರಿಕೆ ಮಾಡಿಕೊಳ್ಳಬಲ್ಲರು.

ಇಂದಿನ ಕಾಲದಲ್ಲಿ ಸಹ ಖಾದಿಯಾನಿನ ಅಭಿವೃದ್ಧಿ ಇದಕ್ಕೆ ಸಾಕ್ಷ್ಯವಾಗಿದೆ. ಖಾದಿಯಾನಿಗೆ ಜನರು ಹೋಗುವುದು ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಊರು ಆದ ಕಾರಣದಿಂದಾಗಿದೆ. ಎಲ್ಲ ನಗರಗಳ ಹಾಗೆ ಅದರ ಜನ ಸಂಖ್ಯೆ ವರ್ಧಿಸಿದೆ. ನಗರ ವಿಶಾಲವಾಗುತ್ತಿದೆ. ಅಲ್ಲಿನ ವ್ಯಾಪಾರಿಗಳು, ಜಲ್ಸ ನಡೆಯುವಾಗ ನಮ್ಮ ವ್ಯಾಪಾರ ವರ್ಧಿಸುತ್ತದೆ ಎಂಬ ಪ್ರತೀಕ್ಷೆಯಲ್ಲಿರುತ್ತಾರೆ. ಅಲ್ಲಿ ನಮ್ಮವರ ಮತ್ತು ಅನ್ಯರ ಅಭಿವೃದ್ಧಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾರಣದಿಂದಾಗುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾದಿಸಿದಾಗ ಜನರು ಅವರ ಬಳಿಗೆ ಬರಲು ಪ್ರಾರಂಭಿಸಿದರು. ಅದರಿಂದ ಅಲ್ಲಿನ ಜನರಿಗೆ ಲಾಭಕರವಾಯಿತು. **ಲಾ ಯಶ್‌ಖಾ ಜಲೀಸಹುಮ್** ಅವರ ಸಭೆಗಳು ಕಷ್ಟದಾಯಕವಾಗಲಿಲ್ಲ ಎಂಬ ಇಲ್‌ಹಾಮ್ ಪ್ರಕಾರ ಅಲ್ಲಿನ ಜನರಿಗೆ ಸಹ ಅನುಗ್ರಹ ಲಭಿಸಿತು. ಇವುಗಳೆಲ್ಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷ್ಯಗಳಾಗಿವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಒಬ್ಬ ಮೌಲವಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದು ಹೇಳಿದರು: ನಾನು ನಿಮ್ಮ ಒಂದು ದೃಷ್ಟಾಂತ ಕಾಣಲು ಬಂದಿರುವೆನು ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ನೀವು ನನ್ನ ಗ್ರಂಥ **ಹಖೀಖತುಲ್ ವಹೀ** ಓದಿರಿ. ನನ್ನ ಸತ್ಯತೆಗೆ ಸಾಕ್ಷ್ಯವಾಗಿ ಅಲ್ಲಾಹನು ಎಷ್ಟೆಲ್ಲಾ ದೃಷ್ಟಾಂತಗಳನ್ನು ತೋರಿಸಿದ್ದಾನೆಂದು ಆಗ ನಿಮಗೆ ತಿಳಿಯುವುದು. ನೀವು ಅವುಗಳಿಂದ ಲಾಭ ಪಡೆದಿಲ್ಲ. ಹೀಗಿರುವಾಗ ಇನ್ನಷ್ಟು ದೃಷ್ಟಾಂತ ನೋಡಲು ಬಂದಿರುವುದಾದರೂ ಏಕೆ? ಎಂದು ಹೇಳಿದರು.

ಒಬ್ಬ ವ್ಯಕ್ತಿ ಎರಡು ನಿಮಿಷ ಅಥವಾ ಐದು ನಿಮಿಷಗಳಲ್ಲಿ ಈಡೇರಬಲ್ಲ ಮೂರು–ನಾಲ್ಕು ಭವಿಷ್ಯವಾಣಿಗಳ ಬಗ್ಗೆ ಹೇಳಿದರೆ ನಾವು ಎರಡು ವರ್ಷ ಏಕೆ ಎರಡು ನೂರು ವರ್ಷಗಳಲ್ಲಿ ಈಡೇರಬಲ್ಲ ಭವಿಷ್ಯವಾಣಿ ಸಹ ನಂಬುವೆವು.

ಎರಡು ನಿಮಿಷ ಅಥವಾ ಐದು ನಿಮಿಷಗಳಲ್ಲಿ ಈಡೇರಬಲ್ಲ ಭವಿಷ್ಯವಾಣಿಗಳನ್ನು ಕಂಡರೆ ದೀರ್ಘ ಕಾಲದ ನಂತರ ಈಡೇರಬಲ್ಲ ಭವಿಷ್ಯವಾಣಿಗಳನ್ನು ಸಹ ನಂಬಬಹುದು. ಆದರೆ ಇಂತಹ ಭವಿಷ್ಯವಾಣಿಗಳು ಇಲ್ಲವೆಂದಾದರೆ ದೀರ್ಘಕಾಲದ ನಂತರ ಈಡೇರಲಿರುವ ಭವಿಷ್ಯವಾಣಿಗಳನ್ನು ನಂಬುವುದಾದರೂ ಹೇಗೆ? ಇದು ವಿವೇಕಕ್ಕೆ ವಿರುದ್ಧವಾಗಿದೆ. ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಗಳು ಅವರ ಜೀವಿತ ಕಾಲದಲ್ಲಿ ಈಡೇರಿದುವು. ಈಗ ಸಹ ಈಡೇರುತ್ತಾ ಇವೆ. ಜಮಾಅತಿನ ದೈನಂದಿನ ಅಭಿವೃದ್ಧಿ ಇದಕ್ಕೆ ಸಾಕ್ಷ್ಯವಾಗಿದೆ.

ಅಲ್ಲಾಹನು ಈಡೇರಿಸುತ್ತಿರುವ ಭವಿಷ್ಯವಾಣಿಗಳು ಯಾರಿಗೆ ಕಾಣಿಸುತ್ತಾ ಇಲ್ಲವೋ ಅವರು ಅವುಗಳನ್ನು ಕಾಣುವಂತಾಗಲು ಅಲ್ಲಾಹನು ಅವರಿಗೆ ದೃಷ್ಟಿಯನ್ನು ದಯಪಾಲಿಸಲಿ. ಅವರು ಅವುಗಳನ್ನು ಕಾಣುವಂತಾಗಲಿ. ಅಲ್ಲಾಹನು ನಮ್ಮನ್ನು ಸಹ ವಿಶ್ವಾಸದಲ್ಲಿ ದೃಢತೆಯನ್ನು ಹೊಂದುತ್ತಾ ಹೋಗುವವರನ್ನಾಗಿ ಮಾಡಲಿ – ಆಮೀನ್.

–––––––––––––––*****––––––––––––––

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 17-04-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon